ಚಿತ್ರದುರ್ಗ ಡಿಸ್ಟ್ರಿಕ್ಟ್ಬೋರ್ಡ.

ಪ್ರೊಸೀಡಿಂಗ್ಸ್.

1904ನೆ ಇಸವಿ ಮಾರ್ಚಿ ಮಾಹೆ ತಾರೀಖು 3ನೆ ಗುರುವಾರ ಹಗಲು 3 ಘಂಟೆಗೆ ಚಿತ್ರದುರ್ಗದಲ್ಲಿ ನಡದ ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಂಡ್ ಜೋಡ್ಯು ವಿಷಯಂಗ್ ಬಾಬತು.

ಹಾಜರು.

ಹಚ್. ರಾಮಾನುಜೈಯ್ಯಂಗಾರ್, ಎಸಿಕ್ಯೂಟರ್, ಪ್ರಸಿಡೆಂಟ್.

ಅಫಿಷಿಯಲ್ ಮೆಂಬರುಗಳು.

1. ಚಿತ್ರದುರ್ಗದ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾ॥ ರವರು.
2. ಚಿತ್ರದುರ್ಗದ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜ್ಯರವರು.
3. ಡಿಟೋ ಸ್ಕೂಲುಗಳ ಡೆಪ್ಯೂಟಿ ಇನ್ಸ್ಪೆಕ್ಟ್ರವರು.
4. ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾ॥ ರವರು.
5. ಚಿತ್ರದುರ್ಗದ ಡಿ॥ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಸಾ॥ ರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ವೆ॥ ಪಟೇಲ್ ಕೆಂಚವೀರಪ್ಪನವರು, ಚಿಕ್ಕದುರ್ಗ ತಾಲ್ಲೂಕು.
2. ,, ಟಿ. ಸ್ವಾಮಿರಾಯಾಚಾರ್ಯರವರು, ಡಿಟೋ
3. ,, ಖಾಜಿ ಸೈಯ್ಯದ್ ಮೊಹದೀಹುಸೇನ್ ಸಾ॥ ರು, ಡಿಟೋ ತಾಲ್ಲೂಕ
4. ,, ತುಪ್ಪದ ವೀರಣ್ಣನವರು, ಚಳ್ಳಕೆರೆ ತಾಲ್ಲೂಕು.
5. ,, ಕಾನುಭೋಗ ಹನುಮಂತಪ್ಪನವರು, ಡಿಟೋ
6. ,, ಕಾನುಭೋಗ ಗೋಪಾಲಯ್ಯನವರು, ಹೊಳಲಕೆರೆ ತಾಲ್ಲೂಕು.
7. ,, ನಾಡಿಗ ಸಿದ್ದರಾಮಯ್ಯನವರು, ಡಿಟೋ
8. ,, ಕಾನುಭೋಗ ಚಿಂಣಗಾರಯ್ಯನವರು, ಹಿರಿಯೂರು ತಾಲ್ಲೂಕು.
9. ,, ಖಾಸಿಂಸಾಬರವರು, ಹೊಸದುರ್ಗ ತಾಲ್ಲೂಕು.
10. ,, ಭಕೀರ್ ಸಾಹೇಬರು, ಜಗಲೂರು ತಾಲ್ಲೂಕು.
11. ,, ಅಚ್ಚಪ್ಪನಾಯಿಕರು, ಹರಿಹರ ಸಬ್ ತಾಲ್ಲೂಕು.
12. ,, ಬಾರ ಸಣ್ಣಪ್ಪನವರು, ಮೊಳಕಾಲ್ಮೂರು ತಾಲ್ಲೂಕು.
13. ,, ಅದೋನಿ ನರಸಿಂಗಪ್ಪನವರು, ಡಿಟೋ
14. ,, ಲೋಕಿಕೆರೆ ಹನುಮಂತಪ್ಪನವರು, ದಾವಣಗೆರೆ ತಾಲ್ಲೂಕು

ಗೈರ್ ಹಾಜರು.

ಅಫಿಷಿಯಲ್ ಮೆಂಬರು.

1. ಚಿತ್ರದುರ್ಗದ ಡಿಸ್ಟ್ರಿಕ್ಟ್ 2ನೆ ಅಸಿಸ್ಟೆಂಟ್ ಕಮಿಷನರ್ ಸಾ॥ ರವರು, (ಇವ[illegible]ದಮೇಲೆ ಇದ್ದಾರೆ).

ನಾನ್ ಅಫಿಷಿಯಲ್ ಮೆಂಬರುಗಳು.

1. ವೆ॥ ಸಿ. ಎಸ್. ಕ್ರಿಷ್ಣಪ್ಪನವರು, ಹಿರಿಯೂರು ತಾಲ್ಲೂಕು.
2. ,, ಜೋಡಿದಾರ್ ಶೇಷಾಚಾರ್ಯ, ಹೊಸದುರ್ಗದ ತಾಲ್ಲೂಕು.
3. ,, ಟಿ. ಷಡಾಕ್ಷರಪ್ಪನವರು, ದಾವಣಗೆರೆ ತಾಲ್ಲೂಕು.
4. ,, ನಬಿ ಸಾಬರು, ಡಿಟೋ ತಾಲ್ಲೂಕು.

(1) ಫೈನ್ಯಾನ್ಸ್ ಕಮಿಟಿಯವರಿಂದ ತಲಪಿದ 1904—05ನೆ ಸಾಲಿನ ಜಮಾಖರ್ಚು ಬಾಬತು ಬಡ್ಜಟ್ ಎಸ್ಟಿಮೇಟನ್ನು ಓದಲಾಯಿತು.

ರೆಜೊಲ್ಯೂಷನ್—ಫೈನ್ಯಾನ್ಸ್ ಕಮಿಟಿಯವರಿಂದ ಬಂದ ಜಮಾಖರ್ಚು ಬಡ್ಜಟ್ ಎಸ್ಟಿ[illegible]ನ್ನು ಅಂಗೀಕರಿಸಬಹುದು. ಈ ಎಸ್ಟಿಮೇಟಿಗೆ ಪ್ರೊವಿಜನಲ್ ವರ್ಕ್ಸಿಗೆ (ಎ 1) ಎಂಬ ಹೆಡ್ಡಿಗೆ 4,000 ರೂಪಾ[illegible]ಖಲ್ಯಾಡಿಸಬೇಕು.

(2) ಹೊಸದುರ್ಗದ 3ನೆ ಕ್ಲಾಸ್ ಟಾವಲರ್ಸ್ ಬಂಗ್ಲೆಗೆ ಅವಶ್ಯವಾಗಿ ಆಗಬೇಕಾದ [illegible]ರಿ ಮತ್ತು ಇತರೆ ಕಾಮಗಾರಿಗಳ ಪ್ರಸ್ತಾವನೆಯನ್ನು ಚಿತ್ರದುರ್ಗದ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾ॥ ರವರಿಂದ 15—9—[illegible]03ನೆ ಮತ್ತು 803ನೆ ನಂಬರು ಜೊತೆಗೆ ತಲಿರುವ 519 ಮತ್ತು 1,646 ರೂಪಾಯಿಗಳ ಬಾಬತು ಎರಡು ಎಸ್ಟಿಮೇಟುಗಳ ವಿಚಾರ ಓದಲಾಯಿತು.

ರೆಜೊಲ್ಯೂರ್ಷ್—ಹಾಲಿ ಹೀನಸ್ಥಿತಿಯಲ್ಲಿರುವ ಈ ಕಟ್ಟಡಕ್ಕೋಸ್ಕರ ಹಣ ಪೆಚ್ಚ ಮಾಡುವದು ಉಪಯೋಗವಾದ್ದಲ್ಲವಾಗಿ ಬಿದರಕೆರೆಯಲ್ಲಿರುವ ಇನ್ಸ್‌ಪೆಕ್ಷರ್ ಲಾಡ್ಜನಂಥಾ ಒಂದು ಹೊಸ ಕಟ್ಟಡವನ್ನು ಕಟ್ಟುವದು ಯುಕ್ತವೆಂದು ಬೋರ್ಡಿನವರು ಯೋಚಿಸಿರುತ್ತಾರೆ. ಈ ವಿಚಾರದಲ್ಲಿ ಗೌರ್ನಮೆಂಟಿಗೆ ಬರಿಯಬೇಕು.

(3) ಚಿತ್ರದುರ್ಗದ ತಾಲ್ಲೂಕು ಮಾನಂಗಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಒಂದು ಶೇದೋಭಾವಿ ಹೊಸದಾಗಿ ತೆಗಿಯುವದಕ್ಕೋಸ್ಕರ 441 ರೂಪಾಯಿಗೆ ಅಂದಾಜು ಪ್ಲಾನು ಹಾಗು ಆ ಗ್ರಾಮದ ನಿವಾಸಿಗಳಿಂದ ಈ ವಿಚಾರದಲ್ಲಿ ಹಾಜರಾದ ಅರ್ಜಿನಿಗೆ ಚಿತ್ರದುರ್ಗದ ಡಿ|| ಯಗ್ಜಿಕ್ಯೂಟಿವ್ ಇಂಜನಿಯರ್ ಸಾ|| ರವರಿಂದ ತಲಪಿರುವ 27—2-04ನೆ ಮಾರ್ಕಿಂ 166ನೆ ನಂಬರು ಡಾಕೇಟ್ ಓದಲಾಯಿತು.

ರೆಜೊಲ್ಯೂರ್ಷ್—ಮೇಲ್ಕಂಡ ಕಾಮಗಾರಿ ಆಗತಕ್ಕದ್ದು ಯುಕ್ತವೆಂದು ಬೋರ್ಡಿನವರು ಅನುಮೋದಿಸಿರುತ್ತಾರೆ. ಆದರೆ ಈ ಕಾಮಗಾರಿಗೋಸ್ಕರ ಆ ಗ್ರಾಮದವರು ಎಷ್ಟು ಹಣ ಕಂಟ್ರಿಬ್ಯೂರ್ಷ್ ಕೊಡುತ್ತಾರೆಂಬದು ತಿಳಿಯತಕ್ಕದ್ದು ಅವಶ್ಯಕ.

(4) ಈ ಡಿಸ್ಟ್ರಿಕ್ಟಿನಲ್ಲಿ ನಡಿಯಬೇಕಾದ ನ್ಯಾನಿಬೆಂ ಕಾಮುಗಾರಿಗಳಿಗೋಸ್ಕರ ಚಾಲತಿ ಸಾಲಿಗೆ "ಲೋಕಲ್ ಫಂಡ್ಸ್ ಜನರಲ್" ಹಣದ ಶಿಲ್ಕಿನ ಪೈಕಿ 5,000 ರೂಪಾಯಿಗಳನ್ನು ಸ್ಪೆಷಲ್ ಕೇಸಾಗಿ ಮಂಜೂರು ಮಾಡಿ ಈ ಹಣದಿಂದ ನಡಿಸಲ್ಪಡುವ ಕಾಮುಗಾರಿಗಳನ್ನು ಪುರು ಮಾಡಿಸುವದಕ್ಕೆ ಮೊದಲು ಇಂಥಾ ಕಾಮಗಾರಿಗಳ ಬಾಬತು ಒಂದು ಸ್ಟೇಟ್‌ಮೆಂಟನ್ನು ಕಳುಹಿಸಬೇಕೆಂದು ಗೌರ್ನಮೆಂಟಿನಿಂದ ತಲಪಿರುವ 3—2—1904ನೆ ಮಾರ್ಕಿಂ 2853-4-L. F. 93-97ನೆ ನಂಬರು ಪ್ರೊಸಿಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

(5) ಅರಹಳ್ಳಿಹಟ್ಟಿ ಭಂಡಿತೋಟಗೋಸ್ಕರ ಇರುವ 5 ರೂಪಾಯಿ ತಲಬಿನ ಕೇರ್‌ಟೇಕರ್ ಇನಾಮನ್ನು ವಜಾ ಮಾಡಿ ಈ ಬಾಬತು ಸೇವಿಂಗ್ಸ್ ಹಣದಿಂದ ಅರಹಳ್ಳಿ ಹಟ್ಟಿ ಮುಜರೈ ಛತ್ರದ ಪಾರಪತ್ತೆಗಾರನಿಗೆ 5 ರೂಪಾಯಿ ಬದಲಾಗಿ ಮಾಹೆಯಾನಾ 9 ರೂಪಾಯಿ ತಲಬು ಕೊಡಬೇಕೆಂದು ಗೌರ್ನಮೆಂಟಿಗೆ ಶಿಫಾರಸು ಮಾಡಿದಲಾಗಿ ಆರೀತಿ ಸಂಬಳ ಜಾಸ್ತಿ ಮಾಡಲು ಆಗುವದಿಲ್ಲ. ಆದರೆ ಸದರಿ ಸೇವಿಂಗ್ಸಿನಿಂದ ಮಾಹೆಯಾನಾ 5 ರೂಪಾಯಿ ಅಲೋಯನ್ಸ್ ತರೀಕು ಕೊಡುವದನ್ನು ಮಂಜೂರು ಮಾಡಿರುವದಾಗಿ ಅಲ್ಲಿಂದ ತಲಪಿರುವ 8—2—04ನೆ ಮಾರ್ಕಿಂ 2916-18—L. F. 76-94ನೆ ನಂಬರು ಪ್ರೊಸಿಡಿಂಗ್ಸ್.

ಓದಿ ರಿಕಾರ್ಡು ಮಾಡಲಾಯಿತು.

(6) ಚಳ್ಳಕೆರೆ-ಪಾವಗಡ ರಸ್ತೆ ಸ್ಪೆಷಲ್ ರಿಪೇರ್ಸ್‌ಗೋಸ್ಕರ 4,000 ರೂಪಾಯಿ ಮಂಜೂರಾಗಿ 190 ;—05ನೆ ಸಾಲಿನಲ್ಲಿ ಈ ಕಾಮಗಾರಿಗೋಸ್ಕರ 3,000 ರೂಪಾಯಿ ಉಪಯೋಗಿಸಿಕೊಳ್ಳಲು ಆರ್ಡರಾಗಬಹುದೆಂಬ ಬಾಬೆ ಚಿತ್ರದುರ್ಗದ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರಿಂದ ತಲಪಿರುವ 25—12—03ನೆ ಮಾರ್ಕಿಂ 1092ನೆ ನಂಬರು ಡಾಕೇಟ್ ಓದಲಾಯಿತು.

ರೆಜೊಲ್ಯೂರ್ಷ್—ಈ ಪ್ರೊಪೋಜಲ್ ನ್ಯೂ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರು ವಾಪಸು ತೆಗದುಕೊಂಡಿರುತ್ತಾರೆ.

(7) ಚಿತ್ರದುರ್ಗ-ಚಳ್ಳಕೆರೆ ರಸ್ತೆಯು, ಪ್ರಾವಿಷಿಯಲ್ ಫಂಡ್ಸಿನಿಂದ ಮೆಂಟೇ ಮಾಡಲ್ಪಡುತ್ತಿರುವ ಬಂಕಿಪುರ-ಚಿತ್ರದುರ್ಗ ರಸ್ತೆಯ ಕಂಟಿನ್ಯೂಯೇರ್ಷ ಆಗಿರುತ್ತಾದ್ದರಿಂದ, ಸದರಿ ರಸ್ತೆಯ ಬಾಬತು ಮೆಂಟಿನನ್ಸ್ ಅಲೋರ್ಯನ್ಸನ್ನು ಸಹ ಇನ್ನು ಮುಂದೆ ಪ್ರಾವಿಷಿಯಲ್ ಫಂಡ್ಸಿನಿಂದ ಕೊಡತಕ್ಕದ್ದು ಯುಕ್ತವೆಂದು ಪ್ರೆಸಿಡೆಂಟ್ ಸಾಹೇಬರವರು ಪ್ರೊಪೋಜ್ ಮಾಡಿದರು.

ರೆಜೊಲ್ಯೂರ್ಷ್—ಚಿತ್ರದುರ್ಗ-ಚಳ್ಳಕೆರೆ ರಸ್ತೆಯು ಬಂಕಿಪುರ-ಚಿತ್ರದುರ್ಗದ ರಸ್ತೆಯ ಕಂಟಿನ್ಯೂಯೇರ್ಷ ಆಗಿರುತ್ತಾದ್ದರಿಂದ ಆ ರಸ್ತೆಯ ಮೆಂಟಿನನ್ಸನ್ನು ಡಿಸ್ಟ್ರಿಕ್ಟ್ ಫಂಡ್ಸಿನಿಂದ ಪ್ರಾವಿಷಿಯಲ್ ಫಂಡ್ಸಿಗೆ ವರ್ಗ ಮಾಡತಕ್ಕ ಬಾಬೆ ಗೌರ್ನಮೆಂಟಿಗೆ ಶಿಫಾರಸು ಮಾಡಬೇಕು.

ಹೆಚ್. ರಾಮಾನುಜಯ್ಯಂಗಾರ್,
ಪ್ರೆಸಿಡೆಂಟ್.

ಬೆಂಗಳೂರು ಡಿವೀಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ರ 1903—1904ನೆ ಇಸವಿ ಮಿ|| ಅರ್ಜಿ ನಂಬರ್ 331.

ಮೃತಪಟ್ಟ ಕಾಯಂಗಡಿ ವೆಂಕಟರಮಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಸಿಟಿ ಹೊಸಪ್ಯಾಟೆ ಮಾರಿಕಟ್ಟೆಯಲ್ಲಿರುವ ಕಾಯಂಗಡಿ 1ನೆ ರಂಗಪ್ಪ, 2ನೆ ರಂಗಸ್ವಾಮಪ್ಪ, 3ನೆ ಶ್ರೀರಂಗಪ್ಪ ಪೈನರ್, ಗಾರ್ಡಿಯರ್ 1ನೆ ರಂಗಪ್ಪ ಎಂಬವರು, ಮೃತಪಟ್ಟ ಸದರೀ ಕಾಯಂಗಡಿ ವೆಂಕಟರಮಣಪ್ಪನವರಿಗೆ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕಾಯಂಗಡಿ ವೆಂಕಟರಮಣಪ್ಪನವರ ಜೊದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ರ 1901ನೆ ಇಸವಿ 7ನೆ ರೆಗ್ಯುಲೇರ್ಷ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ರಂಗಪ್ಪ, 2ನೆ ರಂಗಸ್ವಾಮಪ್ಪ 3ನೆ ಶ್ರೀರಂಗಪ್ಪನವರ ಅರ್ಜಿಯನ್ನು ಸ್ರ 1904ನೆ ಇಸವಿ ಮೇ ತಿಂಗಳು ತಾರೀಖು 24ರಲ್ಲು ಕೇಸಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಯಂಗಡಿ ವೆಂಕಟರಮಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1904ನೆ ಇಸವಿ ಮಾರ್ಚ್ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.